ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (395)264
ಸದಸ್ಯರ ಹೆಸರು : ಶ್ರೀ.ವಿ.ಸೋಮಣ್ಣ
ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)
: ಮಾನ್ಯ ಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸಂಚರಿಸುವ ಸರಾಸರಿ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು?

ದಿನಾಂಕ: **30-04-2008** ಅಂತ್ಯಕ್ಕೆ ಇರುವಂತೆ ಬೆಂಗಳೂರು ನಗರದಲ್ಲಿ ನೋಂದಾಯಿತವಾಗಿ ಸಂಚರಿಸುತ್ತಿರುವ ಒಟ್ಟು ದ್ವಿಚಕ್ರ ವಾಹನಗಳ ಸಂಖ್ಯೆ: **22,18,040**

ಆ) ವಾಹನಗಳ ದಟ್ಟಣೆಯಿಂದ ದ್ವಿಚಕ್ರ ವಾಹನಗಳು ಕನಿಷ್ಠ ವೇಗದಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಇ) ಬೆಂಗಳೂರು ನಗರದಲ್ಲಿ ದ್ವಿಚಕ್ರ ವಾಹನ ಚಾಲಕರು ಹೆಲ್ಮೆಟ್ ಧರಿಸುವುದನ್ನು ಯಾವಾಗ ಕಡ್ಡಾಯಗೊಳಿಸಲಾಯಿತು?

ಸರ್ಕಾರದ ಅಧಿಸೂಚನೆ

ಸಂ:ಹೆಚ್.ಡಿ/**278**/ಎಸ್.ಎಸ್.ಟಿ/**2004**, ದಿನಾಂಕ:**01-08-2006** ಪ್ರಕಾರ ಬೆಂಗಳೂರು ನಗರದಲ್ಲಿ ದ್ವಿಚಕ್ರ ವಾಹನ ಸವಾರರಿಗೆ **01-11-2006** ರಿಂದ ಹೆಲ್ಮೆಟ್ ಕಡ್ಡಾಯಗೊಳಿಸಲಾಯಿತು.

ಈ) ಬೆಂಗಳೂರು ನಗರದಲ್ಲಿ ದ್ವಿಚಕ್ರ ವಾಹನ ಚಾಲಕರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನಗಳಿಗೆ ಹೆಲ್ಮೆಟ್ ಕಡ್ಡಾಯ ಗೊಳಿಸಿರುವುದನ್ನು ರದ್ದುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (397)265
2) ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ.
3) ಉತ್ತರಿಸಬೇಕಾದ ಸಚಿವರು : (ಶ್ರೀ.ಬಿ.ಎಸ್.ಯಡಿಯೂರಪ್ಪ)
: ಮುಖ್ಯ ಮಂತ್ರಿಗಳು

ಅ) ಕಳೆದ **3** ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಷ್ಟು ಜನ ನಿವೇಶನರಹಿತ ಅರ್ಜಿದಾರರಿಗೆ ನಿವೇಶನಗಳನ್ನು ವಿವಿಧ ಬಡಾವಣೆಗಳಲ್ಲಿ ಹಂಚಿಕೆ ಮಾಡಿದೆ;

ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅರ್ಕಾವತಿ ಬಡಾವಣೆಯಲ್ಲಿ ಒಟ್ಟು ವಿವಿಧ ಅಳತೆಯ **8,813** ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) **2008–09**ನೇ ಸಾಲಿನಲ್ಲಿ ಬಿ.ಡಿ.ಎ. ವತಿಯಿಂದ ಹೊಸದಾಗಿ ಎಷ್ಟು ಬಡಾವಣೆಗಳನ್ನು ನಿರ್ಮಿಸುವ ಹಾಗೂ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡುವ ಉದ್ದೇಶವಿದೆ;

ಸರ್ಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ರಚಿಸಲು ಅನುಮೋದನೆ ನೀಡಿದ್ದು, ಈ ಬಡಾವಣೆ ರಚಿಸಲು ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರಡಿಸಿರುತ್ತದೆ. ಈ ಬಡಾವಣೆಯಲ್ಲಿ ಸುಮಾರು **65,000** ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈ ಕೆಳಕಂಡ **4** ಬಡಾವಣೆಗಳನ್ನು ರಚಿಸಲು ಯೋಜಿಸಲಾಗಿದೆ.

1) ಶಿವರಾಮ ಕಾರಂತ ಬಡಾವಣೆ.
2) ಡಿ.ದೇವರಾಜ ಅರಸು ಬಡಾವಣೆ.
3) ಕೆ.ಸಿ.ರೆಡ್ಡಿ ಬಡಾವಣೆ.
4) ಎಸ್.ನಿಜಲಿಂಗಪ್ಪ ಬಡಾವಣೆ.

ಇ) ಹಂಚಿಕೆ ಮಾಡತಕ್ಕ ನಿವೇಶನ ದಾರರು ಹತ್ತು ವರ್ಷಗಳ ಕಾಲ ಯಾರಿಗೂ ಪರಭಾರೆ ಅಥವಾ ಮಾರಾಟ ಮಾಡದೇ ಇರುವ ನಿಬಂಧನೆ ವಿಧಿಸಲಾಗಿದೆಯೇ;

ಹೌದು.

ಈ) ಈ ನಿಬಂಧನೆಯನ್ನು ಮೂರು ವರ್ಷಕ್ಕೆ ಇಳಿಸುವ ಅಥವಾ ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಸದ್ಯಕ್ಕೆ ಇರುವುದಿಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (398)266
2) ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ
3) ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)
: ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) HAL ವಿಮಾನ ನಿಲ್ದಾಣಕ್ಕಾಗಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

HAL ವಿಮಾನ ನಿಲ್ದಾಣ ಭಾರತ ಸರ್ಕಾರದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (AAI) ನಿಯಂತ್ರಣಕ್ಕೊಳಪಟ್ಟಿದೆ ಆದುದರಿಂದ ರಾಜ್ಯ ಸರ್ಕಾರವು ಹಣ ಖರ್ಚು ಮಾಡಿರುವುದಿಲ್ಲ.

ಆ) ಈ ವಿಮಾನ ನಿಲ್ದಾಣದಲ್ಲಿ ಕಡಿಮೆ ದೂರದ ವಿಮಾನಗಳ ಸಂಚಾರವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೆ;

ಇಲ್ಲ.